# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>

**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲೂ - | 08 |
| ಪಿಡಬ್ಲೂ - | 08 |

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್.ಎ. ವಕೀಲರಿಂದಃ</u>**

ನನ್ನ ಹೆಸರು ರಾಜಾಸಾಬ ಎಮ್ ಇ ಎನ್ನುವುದು ಸರಿ. 2018 ರಿಂದ 2020 ರವರೆಗೆ ಹೆಚ್ ಸಿ ಇದ್ದೆ, ನಂತರ 2021 ರಿಂದ 2022 ರವರಗೆ ಎ.ಎಸ್.ಐ ಅಂತಾ ಕೆಲಸ ಮಾಡಿದ್ದೇನೆ. ನಾನು ಮುದಕಪ್ಪ ಹೆಚ್ ಸಿ ಕಡೆಯಿಂದ ಪ್ರಕರಣವನ್ನು ಮುಂದಿನ ತನಿಖೆಗಾಗಿ ವಹಿಸಿಕೊಂಡು ಮದ್ಯಾಹ್ನ 3 ರಿಂದ 4 ಗಂಟೆ ಮದ್ಯೆ ತಹಶೀಲ್ದಾರ ಆಫೀಸ್ ಕೊಪ್ಪಳ ಇಲ್ಲಿ ಪಂಚನಾಮೆ ಮಾಡಿದ್ದೇನೆ. ಪ್ರಭಾಕರ ಭಟ್ಟ ಜೋಷಿ ಉಪತಹಶೀಲ್ದಾರ, ತಹಶೀಲ್ದಾರ ಕಚೇರಿಯಲ್ಲಿ ಗುನ್ನಾ ಸ್ಥಳ ತೋರಿಸಿದರು. ಪಂಚನಾಮೆ ಕಾಲಕ್ಕೆ ಹಬೀಬ್ ಮತ್ತು ಮಂಜುನಾಥ ಎಂಬ ಪಂಚರನ್ನು ಕರೆಯಿಸಿದ್ದೆ ಎನ್ನುವುದು ಸರಿ. ನಾನು ಪಂಚನಾಮೆ ಬರೆದು ಓದಿ ಹೇಳಿ ಸಾಕ್ಷಿದಾರರ ಸಹಿ ಪಡೆದಿದ್ದೇನೆ.

2. ಸದರಿ ಪಂಚನಾಮೆಯನ್ನು ನಮ್ಮ ಕಚೇರಿಗೆ ತೆಗೆದುಕೊಂಡು ಹೋದೆ. ದೋಷರೊಪಣಾ ಪತ್ರದೊಂದಿಗೆ ಆ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಕೊಡಲಾಗಿದೆ. ನಾನು ಮೇಲೆ ಹೇಳಿದಂತೆ ತಹಶೀಲ್ದಾರ ಕಚೇರಿನಲ್ಲಿ ಈ ಪಂಚನಾಮೆ ಸಾಕ್ಷಿದಾರರ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ ಮತ್ತು ಅಲ್ಲಿ ಅವರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ ಕಚೇರಿಯಲ್ಲಿ ಪಂಚನಾಮೆಗೆ ಸಹಿ ಪಡೆದಿದ್ದೇನೆ . ಪಂಚನಾಮೆಗೆ ಇಬ್ಬರದ್ದು ತಲಾ ಒಂದೊಂದು ಸಹಿ ಪಡೆದಿದ್ದೇನೆ.

3. ತಹಶೀಲ್ದಾರ ಕಚೇರಿನಲ್ಲಿ ಮೂಲ ಪಹಣಿ ರಿಜಿಸ್ಟರ್ ಪರಿಶೀಲನೆ ಮಾಡಿಲ್ಲ. ಮೂಲ ರಿಜಿಸ್ಟರ್ ಸೀಜ್ ಮಾಡಿ ಹಾಜರುಪಡಿಸಿಲ್ಲ ಎಂದರೆ ಸರಿ. ನಕಲು ಪ್ರತಿ ಮಾತ್ರ ಹಾಜರುಪಡಿಸಿದ್ದೇವೆ. ನಾನು ಪಂಚನಾಮೆ ಮಾಡಿಲ್ಲ ಮತ್ತು ದೋಷರೊಪಣಾ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**<u>(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)</u>**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**